ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 12.06.2026.

**ಮುಖ್ಯ ವಿಚಾರಣೆ – ವಾದಿ ಪರಃ ಶ್ರೀ. ಕೆ ಎಸ ಎನ್ , ವಕೀಲರಿಂದಃ**

ನಾನು ಎಸ ಎಸ ಎಲ್ ಸಿ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ 3 ಜನ ಅಣ್ಣ ತಮ್ಮಂದಿರು. ಒಬ್ಬ ಪುಲಕೇಶಿ, ಶಿವಾಜಿ ಹಾಗೂ ನಾನು. ಶಿವಾಜಿ ತೀರಿಕೊಂಡಿರುತ್ತಾರೆ. ಅವರ ಹೆಂಡತಿ ತೀರಿಕೊಂಡಿರುತ್ತಾರೆ. ಅವರಿಗೆ ಹೆಣ್ಣು ಮಕ್ಕಳು ಇರುತ್ತಾರೆ. ಅವರೆಂದರೆ ರಚನಾ ಮತ್ತು ಶಿಲ್ಪಾ ನನ್ನ ಅಕ್ಕತಂಗಿಯರಾದ ನೀಲಾ ಮತ್ತು ಪುಷ್ಪಾ ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ದಾವಾ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ –80 ಉತ್ತರ ದಕ್ಷಿಣ 50 ಅಡಿ. ದಾವಾ ಸ್ವತ್ತು ಸದರಿ ಅಳತೆಯ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿತ್ತಿರಾ ಎಂದರೆ ಸಾಕ್ಷಿ ಅವು ಮಾಲ್ಕಿ ಆಸ್ತಿ ಅಳತೆ ಇರುವುದಿಲ್ಲ ಅನ್ನುತ್ತಾರೆ. ಯವ ಆಧಾರದ ಮೇಲೆ ನೀವು ಸದರಿ ವಿಸ್ತೀರ್ಣ ಇರುತ್ತದೆ ಎಂದು ಹೇಳುತ್ತಿರಿ ಎಂದರೆ ಮಾಲ್ಕಿ ಆಸ್ತಿ ನಾವು ನಾವು ಅಲ್ಲಿ ವಹಿವಾಟು ಮಾಡಿದ ಕಾರಣ ಹೇಳುತ್ತೇವೆ ಅನ್ನುತ್ತಾರೆ. ನಾನು ಹದ್ದಬಸ್ಸ ಮಾಡಲು ಅರ್ಜಿ ನೀಡಿರುವುದಿಲ್ಲ. ದಾವಾ ಸ್ವತ್ತು ಸದರಿ ಅಳತೆ ಇದುದ್ದಕ್ಕೆ ಸಂಬಂಧಿಸಿದಂತೆ ಈ ಹಿಂದೆ ಹದ್ದುಬಸ್ತು ಮಾಡಿರುವುದಿಲ್ಲ. ನಾನು ಹದ್ದಬಸ್ತು ಮಾಡಲು ಪ್ರಯತ್ನ ಮಾಡಿರುವುದಿಲ್ಲವಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈ ಕೇಸಿಗೆ ಅನಾನುಕೂಲ ಆಗುತ್ತದೆ ಎಂದು ನೀವು ಹದ್ದುಬಸ್ತು ಮಾಡಲು ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2) ನಿ ಪಿ 8 ರಲ್ಲಿ ದಾವಾ ಸ್ವತ್ತಿನಲ್ಲಿ ಅತೀಕ್ರಮಣವಾಗಿರುವುದಿಲ್ಲವೆಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 4 ರಲ್ಲಿ ಸಹ ನಿ ಪಿ 12 ರಲ್ಲಿ ಸಹ ನಿಮ್ಮ ಸ್ವತ್ತು ಅತೀಕ್ರಮಣವಾಗಿದೆ

ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 10 ವರ್ಷಗಳ ಹಿಂದೆ ಗ್ರಾಮ ಪಂಚಾಯತಿ ಸದಸ್ಯನಾಗಿದ್ದ ಎಂದರೆ ಸರಿ. ಗ್ರಾಮ ಪಂಚಾಯತಿ ಸದಸ್ಯನಾಗಿ ಚುನಾವಣೆಗೆ ಸ್ಪರ್ಧಿಸಲು ಮನೆಯಲ್ಲಿ ಪಾಕೆನಿ ಇರುವುದು ಕಡ್ಡಾಯವಾಗಿತ್ತು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಅನ್ನುತ್ತಾರೆ. ಪಾಕೆನಿ ಕಟ್ಟಿಸಿದ್ದರಿಂದ ಗ್ರಾಮ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಸಿಕ್ಕಿತ್ತು ಎಂದರೆ ಸರಿಯಲ್ಲ. ನೀವು ಸದರಿ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದ ಪತ್ರದ 4 ನೇ ಪ್ಯಾರಾದಲ್ಲಿ 2 ನೇ ವಾದಿ ಗ್ರಾಮ ಪಂಚಾಯತಿ ಆಸ್ತಿ ನಂ 844 ರಲ್ಲಿ ವಾಸಿಸುತ್ತಿದ್ದಾನೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ವಾಸಿಸುತ್ತಿದ್ದಾರೆ ಅನ್ನುತ್ತಾರೆ. ವಾದ ಪತ್ರದಲ್ಲಿ ತಪ್ಪಾಗಿರಬಹುದು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.